ಡೆಲಿಬರೇಶನ್ ಆಗಲಿ. ವಾದ ವಿವಾದದಲ್ಲಿ ಎಲ್ಲಾ ಬರುತ್ತದೆ. ಯಾಕೆಂದರೆ ನಿಮ್ಮನ್ನು ಬಿಟ್ಟು ನಾವೇನೂ ಮಾಡುವುದಕ್ಕೆ ಹೋಗುವುದಿಲ್ಲ. ನಾವೂ ನೀವೂ ಕೂಡಿ ಅದಕೊಂದು ಪ್ರತ್ಯೇಕ ಲೆಜಿಸ್ಲೇಶನ್ ತರೋಣ.

ಅಧ್ಯಕ್ಷರು : ನಿರ್ಣಯವನ್ನು ನಾಳೆ ಪ್ರಶ್ನೋತ್ತರ ಕಾಲ ಆದಮೇಲೆ ಚರ್ಚೆಗೆ ತೆಗೆದುಕೊಳ್ಳೋಣ. ಈಗ ಬಜೆಟ್ ಮೇಲಿನ ಚರ್ಚೆ ಮುಂದುವರೆಯುವುದು.

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) : ಮಾನ್ಯ ಅಧ್ಯಕ್ಷರೇ, ಈಗಾಗಲೇ ಮುಖ್ಯಮಂತ್ರಿಗಳು ಒಂದು ನಿರ್ಣಯವನ್ನು ಈ ಸದನದಲ್ಲಿ ಮೂವ್ ಮಾಡಿದ್ದಾರೆ. ಅದು ತುಂಬಾ ಸ್ವಾಗತಾರ್ಹ. ಆದರೆ ಫೀ ಸ್ಟ್ರಕ್ಚರ್ ಅದಕ್ಕಿಂತ ಇಂಪಾರ್ಟ್‌ಟೆಂಟ್ ಇದೆ. ಒಂದು ವೇಳೆ 100 ಪರ್ಸೆಂಟ್ ಸರ್ಕಾರದ ಕಡೆ ಸೀಟ್ ಇಟ್ಟುಕೊಂಡರೂ ಈ ಪೀಜಿನಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಪಾಲಕರಿಗೆ ಏನು ಉಪಯೋಗವಾಗುವುದಿಲ್ಲ. ಒಂದೂವರೆಯಿಂದ ಎರಡು ಲಕ್ಷದ ರೂ. ತನಕ ಫೀ ಸ್ಟ್ರಕ್ಚರ್ ಇದೆ, ಮುರಗೋಡು ಕಮಿಟಿ ಯಾವ ಆಧಾರವಿಲ್ಲದೆ ಶಿಫಾರ್ಸು ಮಾಡಿದೆ. ಈ ಕಾಲೇಜಿಗೆ ಇಷ್ಟು, ಈ ಕಾಲೇಜಿಗೆ ಇಷ್ಟು ಎಂದು, ಅರ್ಥಾನೇ ಇಲ್ಲ ಅದು. It is most unscientific ನನಗೆ ಯಾವ ಡಾಕ್ಯುಮೆಂಟ್ ಸಿಕ್ಕಿಲ್ಲ, ಆದರೆ ಕೆಲವು ವಿದ್ಯಾರ್ಥಿಗಳ ಜೊತೆ ಚರ್ಚೆ ಮಾಡಿದಾಗ ಒಂದು ಇನ್‌ಸ್ಟ್ರುಮೆಂಟ್ ಇರುತ್ತದೆ, 20 ವರ್ಷದ ತನಕವೂ, ಅದು 50 ಸಾವಿರ, ಮತ್ತೊಂದು 25 ಸಾವಿರ ಹೀಗೆಲ್ಲಾ ಜಮಾ ಮಾಡಿ 1.70 ಲಕ್ಷ ರೂ. 1.80 ಲಕ್ಷ ರೂ. ಈ ತರಹ ಫೀ ಸ್ಟ್ರಕ್ಚರ್ ಹೆಚ್ಚು ಮಾಡಿದ್ದಾರೆ. ಸ್ಟಾಫ್ ಎಷ್ಟು ತೋರಿಸಿದ್ದಾರೆ ಅಷ್ಟು ಸ್ಟಾಫ್ ಇರುವುದಿಲ್ಲ, ಅಷ್ಟು ಸಂಬಳ ಕೊಡುವುದಿಲ್ಲ, ನಮ್ಮ ಗುಲ್ಬರ್ಗಾದಲ್ಲಂತೂ ನಿಮಗೆ ಗೊತ್ತಿದೆ, ಅಲ್ಲಿ ಸ್ಟಾಫ್, ಈವನ್ ಚಪ್ರಾಸಿ ಇವರಿಗೆಲ್ಲಾ ಮೂರು ಮೂರು ತಿಂಗಳು ಆದರೂ ಸಂಬಳ ಕೊಡುವುದಿಲ್ಲ, ಅದನ್ನೆಲ್ಲ ಲೆಕ್ಕದಲ್ಲಿ ತೋರಿಸಿ ಇವತ್ತು ಫೀ ಸ್ಟ್ರಕ್ಚರ್ ಹೆಚ್ಚು ಮಾಡಿದ್ದಾರೆ. ಆ ಫೀ ಸ್ಟ್ರಕ್ಚರ್ ಕಡಿಮೆ ಮಾಡದೇ ಹೋದರೆ, ತಿದ್ದುಪಡಿ ಮಾಡದೇ ಇದ್ದರೆ ಇದರಿಂದ ಏನೂ ಅರ್ಥ ಇಲ್ಲ, ಸರ್ಕಾರ ಅದರ ಬಗ್ಗೆ ಕೂಡ ಒಂದು ನಿರ್ಣಯ ತೆಗೆದುಕೊಳ್ಳಬೇಕು, ಮತ್ತು ಇವತ್ತು ಧೈರ್ಯದಿಂದ ನಮ್ಮ ಮುಖ್ಯಮಂತ್ರಿಗಳೇನು ನಿರ್ಣಯ ತೆಗೆದುಕೊಂಡಿದಾರೆ, ಕೋರ್ಟ್ ತಮ್ಮ ಮನಸ್ಸಿಗೆ ಬಂದದ್ದು ಹೇಳುತ್ತಾರೆ; ಅಂದರೆ it is not binding.

ಅಧ್ಯಕ್ಷರು : ಈ ನಿರ್ಣಯವನ್ನು ಮಾನ್ಯ ಮುಖ್ಯಮಂತ್ರಿಗಳು ಮಂಡನೆ ಮಾಡಿದ್ದಾರೆ, ನಾಳೆ ಬೆಳಿಗ್ಗೆ ಪ್ರಶ್ನೋತ್ತರವಾದ ಮೇಲೆ ಚರ್ಚೆಗೆ ತೆಗೆದುಕೊಳ್ಳೋಣ. ಆಗ ತಾವು ಭಾಗವಹಿಸಬಹುದು.

ಶ್ರೀ ವೈಜನಾಥ ಪಾಟೀಲ್ : ಆಯಿತು.

11. ವಿತ್ತೀಯ ಕಾರ್ಯ ಕಲಾಪ

2004-05ನೇ ಆಯವ್ಯಯ ಮೇಲಿನ ಚರ್ಚೆ (ಮುಂದುವರೆದುದು)

†ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಸನ್ಮಾನ್ಯ ಅಧ್ಯಕ್ಷರೇ, ನೀರಾವರಿ ಬಗ್ಗೆ ಕೂಡ ಸನ್ಮಾನ್ಯ ಅರ್ಥ ಸಚಿವರು ಬಹಳ ಹೆಚ್ಚೇನೂ ಮಾಡಿಲ್ಲ ಅಂತ ನಾನು ಭಾವಿಸುತ್ತೇನೆ. ನೀರಾವರಿ ವಲಯದಲ್ಲಿ ಕೂಡ ಕಳೆದ ಎರಡು ದಶಕಗಳಲ್ಲಿ ತಾವೂ ಇದ್ದೀರಿ ನಾನೂ ಇದ್ದೇನೆ. ಕಾವೇರಿಯಲ್ಲಿ ಆಗಿರುವ ಕೆಲಸ ಬಹಳ ಕಡಿಮೆ. 1987ನೇ ಇಸವಿಯಲ್ಲಿ ಏನು ಹೇಮಾವತಿ ಯೋಜನೆ ಆರಂಭವಾಯಿತು, ಇವತ್ತಿನವರೆಗೂ ತುಮಕೂರು ಜಿಲ್ಲೆಯಲ್ಲಿ, ತಮ್ಮ ಮಂಡ್ಯ ಜಿಲ್ಲೆ ಸುದ್ದಿ ನಾನು ಮಾತನಾಡುವುದಿಲ್ಲ, ಒಂದು ಎಕರೆಗೆ ನಾವು ನೀರು ಕೊಟ್ಟಿಲ್ಲ. ಕೆರೆಗಳಿಗೆ ನೀರು

ಬಿಟ್ಟು ಕುಡಿಯುವ ನೀರಿಗೆ ಬಿಟ್ಟು ಬೇರೆ ನೀರು ಕೊಡುವುದಕ್ಕೆ ಆಗಲಿಲ್ಲ. ಬಹಳ ದೊಡ್ಡ ಕಾರ್ಯಕ್ರಮವನ್ನು ಈ ಸರ್ಕಾರ ಕಳೆದ ವರ್ಷ ಲಾಂಚ್ ಮಾಡಿತು. ನಿಗಮ ಮಾಡುತ್ತಿದ್ದೇನೆ, ಸುಮಾರು 5 ಸಾವಿರ ಕೋಟಿ ರೂ. ಯನ್ನು ಅದಕ್ಕೆ ಶೇಖರಣೆ ಮಾಡುತ್ತಿದ್ದೇವೆ. 5 ಸಾವಿರ ಕೋಟಿ ರೂ ಶೇಖರಣೆ ಆಗಿಬಿಟ್ಟು ನಾವು ಹೇಮಾವತಿ ಅಥವಾ ಕಾವೇರಿ ಭಾಗದ ಎಲ್ಲಾ ಕಾರ್ಯಕ್ರಮಗಳನ್ನು ಕಾವೇರಿ ಜಲ ನಿಗಮದ ಕೆಳಗೆ ತರುತ್ತೇವೆ ಅಂತ ಏನು ಭಾಷಣ ಮಾಡಿದ್ದೀರಿ, ಆ ಕಾವೇರಿ ನಿಗಮಕ್ಕೆ ಈವರೆಗೂ ಕೊಟ್ಟಿರುವ ಹಣವೆಷ್ಟು? ಅವರ ಹತ್ತಿರ ಇರುವ ಹಣವೆಷ್ಟು ಅಥವಾ ಅವರು ಪಬ್ಲಿಕ್‌ನಿಂದ ರೈಜ್ ಮಾಡಿರುವ ಹಣವೆಷ್ಟು ಅಂತ ಸನ್ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ನನಗೆ ಹೇಳಬೇಕಾಗುತ್ತದೆ. ಇದರ ಜೊತೆಗೆ ಇನ್ನೊಂದು ಅವರು ಹೇಳಬೇಕಾಗುತ್ತದೆ – ಅಲ್ಲಿ ಈಗಾಗಲೇ ಇರುವ ಬಾಕಿಯೆಷ್ಟು ಅಂತ, ಹೇಮಾವತಿ ವಲಯದಲ್ಲಿ ಈವರೆಗೆ, ಸನ್ಮಾನ್ಯ ಸಿದ್ದರಾಮಯ್ಯನವರ ನಾನು ಆಚೆ ಇದ್ದೆವು ಆ ಅವಧಿಯಲ್ಲಿ, ಸಾರ್, ನಾನು ಸತ್ಯವಾಗಿ ಹೇಳುತ್ತಿದ್ದೇನೆ, ಎಲ್‌ಒಸಿಯನ್ನು ಕೊಡಲೇ ಇಲ್ಲ ಭಾಗಕ್ಕೆ. ಖಂಡಿತ ಕೊಟ್ಟಿಲ್ಲ, ನಿಮ್ಮ ಕಾಲದಲ್ಲಿ ಆದ ಕೆಲಸ ಬಿಟ್ಟರೆ, ಆಮೇಲೆ ಏನೂ ಆಗಿಲ್ಲ. ನಾನು ಅವತ್ತಿನ ಜನತಾದಳದ ಸಿದ್ದರಾಮಯ್ಯನವರ ಸುದ್ದಿ, ಈಗಿನ ಸಿದ್ದರಾಮಯ್ಯನವರ ಸುದ್ದಿ ಹೇಳುತ್ತಾ ಇಲ್ಲ. ತಪ್ಪು ತಿಳಿದುಕೊಂಡು ಬಿಟ್ಟಾರು ಅಮೇಲೆ, ಕಾಂಗ್ರೆಸ್ ಸರ್ಕಾರ ಇದ್ದಾಗ ಹೇಮಾವತಿ ವಲಯವನ್ನು ಕಾವೇರಿ ವಲಯವನ್ನು ಸಂಪೂರ್ಣವಾಗಿ ನೆಗ್ಲೆಕ್ಟ್ ಮಾಡಿದ್ದಾರೆ. ಇದರ ಜೊತೆಗೆ ಏನಾಯಿತು ಅಧ್ಯಕ್ಷರೇ, ಟ್ರಾನ್ಸಫರೆನ್ಸಿ ಆಕ್ಟ್ ಅಂತ ಭಾರಿ ಮಾತು, ಈ ರಾಜ್ಯದಲ್ಲಿ ನಾವು ಪಾರದರ್ಶಕ ಕಾಯಿದೆಯನ್ನು ಅನುಷ್ಠಾನದಲ್ಲಿಟ್ಟಿದ್ದೇವೆ ಅಂತ ಹೇಳಿ ಬಹಳ ಅವತ್ತು ರಾಜ್ಯಪಾಲರ ಭಾಷಣದಲ್ಲಿ ಆಯಿತು. ನಾನು ಒಂದು ಪ್ರಶ್ನೆಯನ್ನು ಈ ಸರ್ಕಾರವನ್ನು ಕೇಳಲಿಕ್ಕೆ ಮಾನ್ಯ ಸಿದ್ದರಾಮಯ್ಯನವರೇ ಇಷ್ಟಪಡುತ್ತೇನೆ. ಬಿಲ್ ಪಾಸಾದ ಮೇಲೆ ಕಾಮಗಾರಿ ಮುಗಿದು ಬಿಲ್ ಪಾಸಾದ ಮೇಲೆ ಯಾವುದಾದರೂ ದೇಶ ರಾಜ್ಯದಲ್ಲಿ 25, 30 ಪರ್ಸೆಂಟ್ ಕಾಂಟ್ರಾಕ್ಟ್ ದುಡ್ಡಿನಲ್ಲಿ ಕಡಿತ ಮಾಡುತ್ತಾರೆ ಎಂಬುದನ್ನು ಕೇಳಿದ್ದೀರಾ? Negotiations after completion of the work. ನಿಮ್ಮ Transparency Act ಏನು ಹೇಳುತ್ತೆ? Once tenders are floated, you are not supposed to negotiate afterwards. ಒಂದು ಸಲ ನೀವು ಟೆಂಡರ್ ಕರೆದು ಹಾಕಿಸಿಕೊಂಡುಬಿಟ್ಟರೆ ಯಾರು ಲೋಯಸ್ಟ್ ಕೋಟ್ ಮಾಡುತ್ತಾನೆ ಅವರಿಗೇ ನೀವು ಕೊಡಬೇಕು, ಅದರ ನಂತರ ನೀವು ನೆಗೋಶಿಯೇಟ್ ಮಾಡುವ ಅಧಿಕಾರ ಇಟ್ಟುಕೊಂಡೇ ಇಲ್ಲ, ಅಬ್ಬಬ್ಬ, ಇಲ್ಲೊಂದು ಸರ್ಕಾರ ನಡೆದಿದೆ; after the passing of the Bill 25-30 ಪರ್ಸೆಂಟ್ ಕಡಿಮೆ, ಹಾಗಾದರೆ ಒಬ್ಬ ತಿಳವಳಿಕೆ ಇರುವವನು ಈ ರಾಜ್ಯದಲ್ಲಿ ಕೇಳುತ್ತಾನೆ. ಎಷ್ಟು ದುಡ್ಡನ್ನು ತಿಂದುಹಾಕಿರಬಹುದು ಎಂದು ನಾನು ಕೇಳುವುದು, 25 ಪರ್ಸೆಂಟ್ ದುಡ್ಡನ್ನು ಕಡಿತ ಮಾಡಿಕೊಂಡು ನಮಗೆ ಬಿಲ್ ಕೊಡಿ ಅಂತ ಕಂಟ್ರಾಕ್ಟರ್‌ಗಳು ನಿಮಗೆ ಬರೆದುಕೊಟ್ಟಿದ್ದಾರೆ ಅಂದರೆ ಆ 25 ಪರ್ಸೆಂಟ್ ಬಿಲ್‌ಗಿಂತ ಮೊದಲೇ 30 ಪರ್ಸೆಂಟ್ ಬಿಲ್ಲನ್ನು ನಿಮ್ಮ ಇಲಾಖೆಯವರು ಅವರೂ ಇವರೂ ತಿಂದು ಬಿಲ್ ಮಾಡಿದ್ದಾರೆ ಅಂದ ಮೇಲೆ ಕಾಮಗಾರಿ ಎಷ್ಟಾಗಿರಬಹುದು? ಅದನ್ನು ತಮ್ಮ ವಿವೇಚನೆಗೇ ನಾನು ಬಿಡುತ್ತೇನೆ. ತಾವು ಮಂಡ್ಯ ಜಿಲ್ಲೆಯಿಂದ ಬಂದವರು, ಇದರ ಬಗ್ಗೆ ನಿಮಗೆ ಗೊತ್ತು. ಒಂದು ಮಾತನ್ನು ನಾನು ಹೇಳುತ್ತೇನೆ. ಆಶೋಕ್ ಗುಲಾಟಿ ಅಂತ, ಯಾಕ್ ಗುಲಾಟಿ ಹೆಸರು ಹೇಳುತ್ತೇನೆ ಅಂದರೆ Gulati is Division Director, International Food

Policy Research Institute based in U.S.A. ಅವರು ಹೇಳುತ್ತಾರೆ. "Irrigation schemes do not have transparent mechanism and the leakage is high. It is estimated that 40% of the resources spent in these schemes simply vanish. 40% of your funds simply vanish". ಅದು ಯಾರ್ಯಾರ ಬಾಯಿಗೆ ಹೋಗುತ್ತೋ ಗೊತ್ತಿಲ್ಲ. In addition to that, another 30% has been vanished. ಇದು ನಮ್ಮ ರಾಜ್ಯ ಸರ್ಕಾರದಲ್ಲಿ ನಾವು ನೀರಾವರಿಗೆ ಇಟ್ಟುಕೊಂಡು ಬರುತ್ತಿರುವ ಕಥೆಗಳಾಯಿತು. ಮಾನ್ಯ ಸಿದ್ದರಾಮಯ್ಯನವರೇ, ನೀವಿರಲಿಲ್ಲ ಆಗಲೇ ಹೇಳಿದೆ, ಅವರು ಇನ್ನೊಂದು ಮಾತು ಹೇಳುತ್ತಾನೆ. "I would prefer the stress on dry water bodies with this bottom-up attitude is both efficient and more realistic. Personally, I would prefer them to mega irrigation projects. But the allocation in these projects is very little compared with projects of irrigation. ಅದು ಬೇರೆ ಇದೆ, ಬೇಕಾದರೆ ನಿಮಗೆ ಇದನ್ನು ಕಳುಹಿಸುತ್ತೇನೆ. ಸಾರ್, ಈ ರಾಜ್ಯದ ಪರಿಸ್ಥಿತಿಯ ಬಗ್ಗೆ ತಾವು ಯೋಚನೆ ಮಾಡಿ. ಕರ್ನಾಟಕದಲ್ಲಿ ನಾನು ತಿಳಿದ ಮಟ್ಟಿಗೆ 37 ರಿಂದ 40 ಅಥವಾ 47 ಪರ್ಸೆಂಟ್ ಇರಿಗೇಟ್ ಮಾಡಬಹುದು ನಾವು, ಅದಕ್ಕಿಂತ ಬಹಳ ಮಾಡುವುದಕ್ಕೆ ಆಗುವುದಿಲ್ಲ, ಮಲೆನಾಡಿದೆ, ಗುಡ್ಡಗಾಡಿದೆ, topographically ಬಹಳ ವ್ಯತ್ಯಾಸ ಇರುವ ಪ್ರದೇಶ ಇದೆ, ನಮಗೇನು ಮಾಡುವುದಕ್ಕೆ ಮಾಡಿದ್ದೀರಿ ನೀವು? ನಾವು ಡ್ರೈಫಾರ್ಮಿಂಗ್ ಮಾಡುತ್ತಿರುವ ಜನಗಳ ಗತಿಯೇನು? ಸಾರ್, 1990ನೇ ದಶಕದಲ್ಲಿ 1990 ರಿಂದ 96–97 ರವರೆಗೆ 90 ಲಕ್ಷ ಮೆಟ್ರಿಕ್ ಟನ್ ಇದ್ದ ಆಹಾರಧಾನ್ಯ 67 ಲಕ್ಷಕ್ಕೆ ಇಳಿದಿದೆ, incrementation grain ಇಲ್ಲ. ನಿಮ್ಮ ಮ್ಯಾಪ್ ಮೇಲಕ್ಕೆ ಹೋಗುತ್ತಾ ಇಲ್ಲ, ಇಳೀತಾ ಇದೆ, ಯಾವ ಪ್ರಮಾಣದಲ್ಲಿ ಇಳಿಯುತ್ತಿದೆ ಸನ್ಮಾನ್ಯ ಸಿದ್ದರಾಮಯ್ಯನವರೇ, 90 ಲಕ್ಷ ಮೆಟ್ರಿಕ್ ಟನ್ ಧಾನ್ಯ ಉತ್ಪಾದನೆ ಆಗುತ್ತಿದ್ದ ಕರ್ನಾಟಕ ಕಳೆದ ಮೂರು ವರ್ಷಗಳಲ್ಲಿ 65–67 ಲಕ್ಷ ಮೆಟ್ರಿಕ್‌ಟನ್‌ಗೆ ಇಳಿದಿದೆ. ಹಾಗಾದರೆ ಇವತ್ತು ನಮ್ಮ ಗತಿಯೇನು? ಬಯಲುಸೀಮೆ ಪ್ರದೇಶದಲ್ಲಿ ಖುಷ್ಕಿ ಬೇಸಾಯ ಮಾಡಿಕೊಂಡಿದ್ದವರ ಗತಿಯೇನು? ತಾವೇನು ಯೋಜನೆ ಮಾಡಿದ್ದೀರಿ? ಅದಕ್ಕೆ ನೀವು ಹೇಳುತ್ತೀರಿ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡುತ್ತೇನೆ, ಕೃಷಿಗೆ ನಾನು ಸ್ಟೆಸ್ ಕೊಡುತ್ತೇನೆ ಅಂತ, ಯಾವ ರೂಪದಲ್ಲಿ ಕೊಡುತ್ತೀರಿ ನಮಗೆ ಸ್ಟೆಸ್? ತಾವು ಒಂದು ಕಡೆ ಮಾತನಾಡಿದಿರಿ ಕೆಪಿಟಿಸಿಎಲ್ ಅಧಿಕಾರಿಗಳಿಗೆ ನಾನು ಒತ್ತಡ ಹಾಕುತ್ತೇನೆ 85 ಪರ್ಸೆಂಟಿಂದ 90 ಪರ್ಸೆಂಟ್‌ವರೆಗೆ ಅಮೌಂಟನ್ನು ರಿಕವರ್ ಮಾಡಬೇಕು, ಎಂದು ತಮಗೆ ನಾನು ವಿನಂತಿ ಮಾಡುತ್ತೇನೆ.

ದಯಮಾಡಿ ಇದರಲ್ಲಿ ಐಪಿ ಸೆಟ್‌ಗಳನ್ನು ಸೇರಿಸಿಕೊಳ್ಳುವುದಕ್ಕೆ ಹೋಗಬೇಡಿ. ನೀವೇನಾದರೂ ಅಲ್ಪಸ್ವಲ್ಪ ಇವತ್ತು ಬಯಲುಸೀಮೆ ಜನರಿಗೆ ಇನ್‌ಸೆಂಟೀವ್ಸ್‌ನ್ನು ಕೊಟ್ಟಿದ್ದರೆ ಕೆಇಬಿಯಲ್ಲಿ ಟ್ಯಾರಿಫ್ ಇಲ್ಲದಂಥ ಪವರ್‌ನ್ನು ನಮಗೆ ಸಪ್ಲಾಯ್ ಮಾಡುವುದು. ಅದನ್ನೂ ನೀವು ಕಿತ್ತು ಹಾಕುತ್ತೇವೆ, ಅಥವಾ ಅದಕ್ಕೂ ನೀವು ಮೀಟರನ್ನೂ ಹಾಕುತ್ತೇವೆ, ಅದಕ್ಕೂ ನಾವು ಟ್ಯಾಕ್ಸ್‌ನ್ನು ಹಾಕುತ್ತೇವೆ ಎನ್ನುವ ತೀರ್ಮಾನವನ್ನು ಮತ್ತೆ ತೆಗೆದುಕೊಂಡರೆ 60–70% ಅಗ್ರಿಕಲ್ಚರನ್ನು ತಾವು ಕೊಂದ ಹಾಗೆ ಆಗುತ್ತದೆ. ಸಾರ್, ಇಷ್ಟೆಲ್ಲಾ ಪುಕ್ಕಟೆ ಕರೆಂಟನ್ನು ಕೊಟ್ಟೂ ಕೂಡ ನಮಗೇನೂ ಇವತ್ತು ವ್ಯವಸಾಯ ಗಿಟ್ಟಿಲ್ಲ. ಖಂಡಿತಾ ಗಿಟ್ಟಿಲ್ಲ. ಮಾನ್ಯ ಸಿದ್ಧರಾಮಯ್ಯನವರಿಗೂ ಕೂಡ ಅದು ಗೊತ್ತು. ಮತ್ತೆ ನೀವೇನಾದರೂ ಮೋಟಾರನ್ನು ಓಡಿಸಬೇಕು, ಅದಕ್ಕೆ ಮೀಟರನ್ನೂ ಹಾಕುತ್ತೇನೆ,

ಅದಕ್ಕೆ ನೀವು ಛಾರ್ಜ್ ಕಟ್ಟಬೇಕು ಎನ್ನುವ ನಿರ್ಧಾರವನ್ನು ನೀವು ತೆಗೆದುಕೊಂಡರೆ ಒಬ್ಬ ರೈತನೂ ಸಹ ಇವತ್ತು ಕರ್ನಾಟಕದಲ್ಲಿ ಮೋಟಾರನ್ನು ಓಡಿಸಿ ಬೆಳೆಯನ್ನು ಬೆಳೆಯುವ ಸ್ಥಿತಿಯಲ್ಲಿಲ್ಲ. ನೀವು ಹೇಳುತ್ತೀರಿ, ಇಂಡಸ್ಟ್ರೀ ಸ್ಟೇಟಸ್‌ನ್ನು ನಾನು ಅಗ್ರಿಕಲ್ಚರ್‌ಗೆ ಕೊಡುತ್ತೇನೆ Farm to firm ಇದು ಇಂಗ್ಲೀಷ್ ಭಾಷೆ. Farm to firm ಹೇಗೆ ಬರುತ್ತೀರ ಎನ್ನುವುದನ್ನು ನೀವು ಹೇಳಬೇಕಲ್ಲಾ. Farm to firm ಬರುತ್ತೇನೆಂದರೆ ನೀವು ಅಗ್ರಿಕಲ್ಚರ್ ಫಾರಂನಿಂದ ಒಂದು firm ಗೆ ಬರುತ್ತೇನೆ, ಒಂದು ಕಂಪನಿಗೆ ಬರುತ್ತೇನೆಂದು ನೀವು ಹೇಳುತ್ತೀರಿ. ಅಥವಾ ಇಂಡಸ್ಟ್ರೀಸ್‌ಗೆ ಬರುತ್ತೀರಿ. It is again Chidambaram's speech. Farm to firm ನ್ನು ನಾನು shift ಮಾಡುತ್ತೇನೆ, How? What is the mechanism? What is the infrastructure? What are all the funds you have given to that farm? ಹೇಗೆ ಕೊಟ್ಟಿದ್ದೀರಿ ನೀವು.. How will you subsidize the losses? ಮತ್ತೆ ಅದನ್ನು ನೀವು ಮಾಡಬೇಕಾದರೆ ಏನು ಮಾಡಬೇಕು? ನಾನು ಬೆಳೆಯನ್ನು ಹಾಕುವುದಕ್ಕೆ ಆರಂಭ ಮಾಡುವುದಕ್ಕೆ ಮೊದಲೇ ನನಗೊಂದು ಧಾರಣೆಯನ್ನು ನಿಗದಿ ಮಾಡಬೇಕು. ತೆಂಗಿನಕಾಯಿಗೆ ಈ ಬೆಲೆಯನ್ನು ಕೊಡುತ್ತೇನೆ, ಅಕ್ಕಿಗೆ ಈ ಬೆಲೆಯನ್ನು ಕೊಡುತ್ತೇನೆ, ಅಥವಾ ಭತ್ತಕ್ಕೆ ಈ ಬೆಲೆಯನ್ನು ಕೊಡುತ್ತೇನೆ ಷುಗರ್‌ಕೇನ್‌ಗೆ ಈ ಬೆಲೆಯನ್ನು ಕೊಡುತ್ತೇನೆ ಎಂದು ಹೇಳಬೇಕು. Can it be done in this State? ಈ ರಾಜ್ಯಗಳು ಅದನ್ನು ಮಾಡುವುದಕ್ಕೆ ಸಾಧ್ಯವೇ? ಮತ್ತೆ ನನಗೆ ಹೇಗೆ subsidize ಮಾಡುತ್ತೀರಿ? ನನಗೆ support price ಕೊಡುತ್ತೇನೆಂದು ಹೇಳುತ್ತಿರಿ, ಎಷ್ಟು ಕೊಡುತ್ತೀರಿ? ಯಾವಾಗ ಕೊಡುತ್ತೀರಿ? ತಮಗೊಂದು ಮಾತನ್ನು ಹೇಳಿರುತ್ತೇನೆ ಮಾನ್ಯ ಅಧ್ಯಕ್ಷರೇ, ನಮ್ಮ ಪ್ರತಿ ವರ್ಷದ ಈ ಬಜೆಟ್ ಅತಿರೇಕಗಳಿಂದಾಗಿ ನಾವು ಇವತ್ತು ಈ ರಾಜ್ಯದ ರೈತರನ್ನು ಅದರಲ್ಲೂ ಖುಷ್ಕಿ ಬೆಳೆ ಬೆಳೆಯುವಂಥ ಪ್ರದೇಶದ ರೈತರನ್ನು ಸಂಪೂರ್ಣ ನಿರ್ನಾಮ ಮಾಡಿಬಿಟ್ಟಿದ್ದೇವೆ. ತಮ್ಮ ಯೋಜನೆ ಈಗ ಏನು? ಆರು ಪರ್‌ಸೆಂಟ್ ಬಡ್ಡಿಯನ್ನು ಕೊಟ್ಟುಬಿಟ್ಟು ನಾನು ಕೃಷಿ ಕ್ಷೇತ್ರವನ್ನು ಪುನಶ್ಚೇತನ ಮಾಡುತ್ತೇನೆ, ನಾನು appreciate ಮಾಡುತ್ತೇನೆ. ಅವತ್ತು ನಾನು ಪ್ರೆಸ್‌ನವರಿಗೆ ಕೂಡ ಹೇಳಿದೆ. ನಾನು ಈ ಕಾರ್ಯಕ್ರಮಕ್ಕೆ ಸನ್ಮಾನ್ಯ ಸಿದ್ಧರಾಮಯ್ಯನವರನ್ನು ಶ್ಲಾಘಿಸುತ್ತೇನೆ. ಆದರೆ ನಿಮ್ಮ ಪುಸ್ತಕದಲ್ಲಿ ಪ್ರಿಂಟ್ ಆಗಿರುವಾಗ ಅವರು 50 ಕೋಟಿ ರೂ. ಎನ್ನುತ್ತಾರೆ. ತಾವು 60 ಕೋಟಿ ರೂ. ಇಟ್ಟಿದ್ದೇವೆ ಎಂದು ಹೇಳುತ್ತೀರಿ. ಅವನು 7 ಪರ್‌ಸೆಂಟ್ ಎಂದು ಪ್ರಿಂಟ್ ಮಾಡಿದ್ದಾನೆ. ನೀವು ಆರು ಪರ್‌ಸೆಂಟ್ ಎಂದು ಹೇಳಿದ್ದೀರಿ. ಅದನ್ನು ಬಿಟ್ಟುಬಿಡುತ್ತೇನೆ. ಯಾರು ತೆಗೆದುಕೊಳ್ಳಬಹುದು ಇವತ್ತು ಸಿದ್ಧರಾಮಯ್ಯನವರೇ ಆರು ಪರ್‌ಸೆಂಟ್‌ಗೆ ಸಾಲ? ಒಂದೇ ಒಂದು ರೈತ ಕುಟುಂಬ ನಿಮ್ಮ ಸೊಸೈಟಿಗೆ ಹೋಗಿ ಸಾಲ ತೆಗೆದುಕೊಳ್ಳುವ ಒಂದು ಪಹಣಿಯಲ್ಲಿ ಎನ್‌ಕಂಬ್ರೆನ್ಸ್ ಫ್ರೀ ಇದೆಯಾ? ಯಾರಿಗಾದರೂ ಆಧಾರ ಇಲ್ಲದಿದ ಪಹಣಿ, ಆರ್‌ಟಿಸಿ ಕರ್ನಾಟಕದಲ್ಲಿ ಲಭ್ಯ ಇದೆಯಾ? ಅಕಸ್ಮಾತ್ ಲಭ್ಯವಿದ್ದರೆ ಅವನು ಬಡವನಾ? ಮಧ್ಯಮವರ್ಗದವನಾ? ತಾವು ಯೋಚನೆಯನ್ನು ಮಾಡಬೇಕು. ನಾನು ವಿರೋಧ ಮಾಡುವುದಕ್ಕೆ ಮಾತನಾಡುತ್ತಿಲ್ಲ. ಇದೇನು ಆಗಬೇಕು? ತಾವು ಒಂದು ಸಲ ನಿರ್ಣಯವನ್ನು ತೆಗೆದುಕೊಳ್ಳಬೇಕು ಇಲ್ಲಿ. ನಾನು ಈ ವರ್ಷದ ಬಡ್ಡಿಯನ್ನು ಮನ್ನಾ ಮಾಡಿದ್ದೇನೆ. ನಾನು ಈ ವರ್ಷದ ಸಾಲ ಇದ್ದವನಿಗೂ ಕೂಡ ಇನ್ನೊಂದು ಸಲ ಸಾಲ ಕೊಡುವುದಕ್ಕೆ ಪರ್ಮಿಟ್ ಮಾಡಿದ್ದೇನೆ, ನಾವು ಹಿಂದೆ ಬರಗಾಲ ಬಂದಾಗ ಒಂದು ಸಾಲವನ್ನು ಸಿಎಂಟಿ ಮಾಡಿ ಮೂರು ಕಂತು ಮಾಡಿ ಏನು ಫ್ರೆಷ್ ಲೋನನ್ನು ಕೊಡುತ್ತಿದ್ದೆವು, ಅದೇ ವ್ಯವಸ್ಥೆಗೆ ಹಿಂದೆ ಹೋಗುತ್ತೇವೆ. ಕನಿಷ್ಠ ಬಡ್ಡಿಯನ್ನು

ವಜಾ ಮಾಡಬೇಕು. ಸುಸ್ತಿ ಬಡ್ಡಿ ವಜಾ ಮಾಡಿ ನೀವು ಹೊಸ ಸಾಲ ತೆಗೆದುಕೊಂಡು ಇಲ್ಲಿಂದ ಮುಂದಕ್ಕೆ ಆರು ಪರ್‌ಸೆಂಟ್ ಕೊಟ್ಟುಕೊಂಡು ಹೋಗಿ, ಅಂದರೆ ಸ್ವಲ್ಪಮಟ್ಟಿಗೆ ನಿಮ್ಮ ಸ್ಕೀಮ್ ಪ್ರಯೋಜನಕ್ಕೆ ಬರುತ್ತದೆ. ಆದರೆ 60 ಕೋಟಿ ರೂಪಾಯಿಗಳನ್ನು ತಾವೇನು ಇಟ್ಟಿದ್ದೀರಿ, ಇವತ್ತು ಏತ್ಯಾತಕ್ಕೂ ಸಾಲುವುದಿಲ್ಲ. ಅಗ್ರಿಕಲ್ಚರ್ ಲೋನ್‌ಗೆ ನೀವು subsidize ಮಾಡುವ ಇಂಟರೆಸ್ಟ್‌ಗೆ 60 ಕೋಟಿ ರೂ. ಆಗುವುದಿಲ್ಲ. ತಮ್ಮ ತಲೆಯೊಳಗೆ ಇರಬೇಕು. ಸುಮಾರಷ್ಟು Institutions are spoiled because of subsidize ಮತ್ತೆ in time release ಆಗದೇ ಇರುವುದರಿಂದ. ಟಿಎಪಿಸಿಎಂಎಸ್‌ಗಳು ಪಿಎಲ್‌ಡಿ ಬ್ಯಾಂಕ್‌ಗಳು ಎಲ್ಲಾ ಏನಾದರೂ ಇವತ್ತು ವಿನಾಶದ ಅಂಚಿಗೆ ಬಂದಿದ್ದರೆ ತಾವು ನಿಗದಿ ಮಾಡಿದ ಟ್ರಾನ್ಸ್‌ಪೋರ್ಟ್ ಸಬ್ಸಿಡಿಯಿಂದ ಹಿಡಿದು ಅಗ್ರಿಕಲ್ಚರ್ ಸಬ್ಸಿಡಿಯನ್ನು ಸಕಾಲದಲ್ಲಿ ತಾವು ಬಿಡುಗಡೆ ಮಾಡದೆ ಬಂದಿದೆ. ನೀವು ಎಂದೋ ಬಿಡುಗಡೆ ಮಾಡುತ್ತೀರಿ. ಅವರು ಐದು–ಆರು ವರ್ಷಗಳ ಕಾಲ ಬಡ್ಡಿಯನ್ನು ಕಟ್ಟಿರುತ್ತಾರೆ. ಏಳು–ಎಂಟು ವರ್ಷ ಅವರು ಸುಸ್ತಿಯಾಗಿರುತ್ತಾರೆ ಸಾರ್. ತಾವೇನು ಹೇಳಿದ್ದೀರಿ ಇಲ್ಲಿ. ನಾನು ಆರು ಪರ್‌ಸೆಂಟ್ ಮಾಡುತ್ತೇನೆ ಎಂದು, In advance, ನಿಮಗೇನಾದರೂ ಭಗವಂತ ರೈತರ ಬಗ್ಗೆ ಇನ್ನು ಒಳ್ಳೆಯ ಭಾವನೆಯನ್ನು ಉಳಿಸಿದ್ದರೆ, ಮೊದಲ ಕಂತಿನಲ್ಲಿ ಸಂಘಗಳಿಗೆ ಅಥವಾ ಅವರ ಅಪೆಕ್ಸ್ ಇನ್ಸ್‌ಟಿಟ್ಯೂಷನ್‌ಗಳಿಗೆ ನೀವು ರಿಲೀಸ್ ಮಾಡಬೇಕು. ಆ ಹಣವನ್ನು ರಿಲೀಸ್ ಮಾಡಿ ನೀವು ಬಡ್ಡಿಯನ್ನು ಆರು ಪರ್‌ಸೆಂಟ್‌ಗೆ ಕೊಡಿ ಎಂದು ಕೇಳಬೇಕು. ತಾವು ಬಹಳ ಒಳ್ಳೆಯ ಆಸೆಯನ್ನು ಇಟ್ಟುಕೊಂಡು ಚಕ್ರಬಡ್ಡಿ ಮತ್ತೆ ಸುಸ್ತಿ ಬಡ್ಡಿಯನ್ನು ಹಾಕುವುದಿಲ್ಲ ಎಂದು ಹೇಳಿದ್ದೀರಿ. ನಾನು ಸ್ವಲ್ಪ ಇದಕ್ಕೆ ಬೇರೆ ರೀತಿ ಹೇಳಬೇಕಾಗುತ್ತದೆ. ಇನ್ಸ್‌ಟಿಟ್ಯೂಷನ್ಸ್ ದೃಷ್ಟಿಯಲ್ಲಿ ಅದು ಖಂಡಿತಾ ಒಳ್ಳೆಯದಲ್ಲ. ನೀವು ಬಡ್ಡಿ ಹಾಕಬೇಕು. ಸುಸ್ತಿ ಬಡ್ಡಿಯನ್ನೂ ಹಾಕಬೇಕು. ಯಾರೂ ರೀಪೇಮೆಂಟನ್ನು ಸಕಾಲದಲ್ಲಿ ಮಾಡುತ್ತಾರೆ, ಅವರಿಗೆ ಇನ್‌ಸೆಂಟೀವ್‌ನ್ನು ಕೊಡಬೇಕು. ಇಲ್ಲದೇ ಹೋದರೆ, ಎಲ್ಲಾ ಸಹಕಾರ ಸಂಘಗಳೂ ಸುಸ್ತಿಯಾಗುತ್ತವೆ. ಬಡ್ಡಿ ಕಟ್ಟಿದ ಮೇಲೆ ಮುಗಿದುಹೋಯಿತು, ಸುಸ್ತಿ ಬಡ್ಡಿಯೂ ಇಲ್ಲ, ಚಕ್ರ ಬಡ್ಡಿಯೂ ಇಲ್ಲ ನನಗೆ, ಹತ್ತು ವರ್ಷಕ್ಕೆ ಬರಲಿ, ಇಪ್ಪತ್ತು ವರ್ಷಕ್ಕೆ ಬರಲಿ ಬಡ್ಡಿ ಕಟ್ಟುವುದಷ್ಟೇನೇ, ಮತ್ತೆ ಯಾವುದೋ ಹೀಗೆ ಒಂದು ಪಾಪ್ಯುಲರ್ ಗೌರ್ನಮೆಂಟ್ ಐದು ವರ್ಷ ಎಲೆಕ್ಷನ್‌ಗೆ ಬಂದಾಗ ಬಡ್ಡಿ ವಜಾ ಮಾಡುತ್ತೇವೆಂದು ಹೇಳಿಕೊಂಡು ಬರುತ್ತಾರೆ, ಅವತ್ತೇನೋ ಒಂದು ಆಗುತ್ತೆ ಎನ್ನುವ ಭಾವನೆ ಬಂದರೆ ಕ್ರೆಡಿಟ್ ಇನ್ಸ್‌ಟಿಟ್ಯೂಷನ್ಸ್‌ನ್ನು ತಾವು ಉಳಿಸುವುದಕ್ಕೆ ಸಾಧ್ಯವೇ ಇಲ್ಲ. ನೀವು ರೈತರಿಗೇನಾದರೂ ಒಳ್ಳೆಯದನ್ನು ಮಾಡಬೇಕಾದರೆ ದಯಮಾಡಿ ಅಧ್ಯಕ್ಷರೇ, ಈ ತೀರ್ಮಾನದಿಂದ ಆಚೆ ಬನ್ನಿ. ನಮಗೇನಾದರೂ ಒಳ್ಳೆಯದು ಮಾಡಬೇಕು ಎಂದು ಇದ್ದರೆ ಬೇರೆ ರೀತಿಯಲ್ಲಿ ಅವರಿಗೆ ಇನ್‌ಸೆಂಟೀವ್ಸ್‌ನ್ನು ಕೊಡಬೇಕು. ಸಹಕಾರ ಸಂಘಗಳಿಗೆ ಬಡ್ಡಿ ಅಥವಾ ಅಸಲನ್ನು ಇಂಥ ಅವಧಿಯೊಳಗೆ ಕಟ್ಟುವ ರೈತನಿಗೆ ಎರಡು ಪರ್‌ಸೆಂಟೋ, ಮೂರು ಪರ್‌ಸೆಂಟೋ, ನಾಲ್ಕು ಪರ್‌ಸೆಂಟೋ ಶಕ್ತಿ ಇದ್ದರೆ ಐದು ಪರ್‌ಸೆಂಟೋ ನಾನು ಸೋಡಿ ಕೊಡುತ್ತೇನೆ ಎಂದು ಹೇಳಿ; ಹೇಗಾದರೂ ಮಾಡಿ ಅವರು ಸಾಲ ಹೊಂಚಿಕೊಂಡು ಬಂದು ಕಟ್ಟುತ್ತಾರೆ. ನಾನು ಚಕ್ರ ಬಡ್ಡಿಯನ್ನೇ ಹಾಕುವುದಿಲ್ಲ, ಪೀನಲ್ ಇಂಟರೆಸ್ಟ್‌ನ್ನು ಹಾಕುವುದಿಲ್ಲ ಅನ್ನುವುದು ವೈಜ್ಞಾನಿಕವಾದ ತೀರ್ಮಾನವಲ್ಲ ಎಂಬುದು ನನ್ನ ಭಾವನೆ. ಇನ್ನುಳಿದ ವಿಷಯಕ್ಕೆ ಬಂದರೆ ಇವತ್ತು ನೀವು ಕಮಿಟ್‌ಮೆಂಟ್‌ನ್ನು ಮಾಡಿದ್ದೀರಿ, ಪ್ರಣಾಳಿಕೆಯಲ್ಲಿ ಹೇಳಿದ್ದೀರಿ. ನಾನು ಈ ಸರ್ಕಾರವನ್ನು ರಚನೆ ಮಾಡಿದರೆ ಜನತಾ ದಳದ ಸಂಯುಕ್ತದವರು, ಕ್ಷಮಿಸಬೇಕು, ನಮಗೆ ಇನ್ನೂ ಆ ಕಾಲ ಆಗಿಲ್ಲ. ಜನತಾ ದಳ ಜಾತ್ಯಾತೀತ

ದವರು ಸಹಕಾರಿ ಸಾಲದ ಮೇಲೆ ಇರುವ ಎಲ್ಲಾ ಬಡ್ಡಿಯನ್ನು, ಸುಸ್ತಿ ಬಡ್ಡಿಯನ್ನು ವಜಾ ಮಾಡುತ್ತೇವೆ, ಮನ್ನಾ ಮಾಡುತ್ತೇವೆಂದು ತಾವು ಜನಗಳಿಗೆ ಹೇಳಿದ್ದೀರಿ. ನೀವು ಹೇಳಿದ ರೀತಿಯಲ್ಲಿ ಜನರು ಏನು ಮಾಡಿದ್ದಾರೆ, ಹೇಗೂ ಸಿದ್ಧರಾಮಯ್ಯನವರು ಜನತಾದಳ (ಎಸ್) ನವರು ಇವತ್ತು ಬಜೆಟ್‌ನ್ನು ಇಡುತ್ತಿದ್ದಾರೆ, ನಾವ್ಯಾರೂ ದುಡ್ಡು ಕಟ್ಟುವುದಿಲ್ಲ, ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಆಗುತ್ತದೆ, ನಾವು ಕಟ್ಟುವುದಿಲ್ಲ ಎಂದು ಹೋದ ತಿಂಗಳು ಜೂನ್ ಎಂಡ್ ರಿಕವರಿ ಪೀರಿಯಡ್ ಏನು ಇತ್ತು, ಒಬ್ಬರೂ ಹಣ ಕಟ್ಟಿಲ್ಲ ಅಧ್ಯಕ್ಷರೇ, ಎಲ್ಲಾ ಚಾತಕ ಪಕ್ಷಿಗಳ ಹಾಗೆ ಕಾಯುತ್ತಾ ಕೂತಿದ್ದಾರೆ. ಇವತ್ತು ಹೇಳುತ್ತೀರಾ, ನಾಳೆ ಹೇಳುತ್ತೀರಾ, ನಾಡಿದ್ದು ಹೇಳುತ್ತೀರಾ ಎಂದು. ದಯವಾಡಿ ಸಿದ್ಧರಾಮಯ್ಯನವರೇ, you must come out with a statement. ಹೋದ ವರ್ಷಕ್ಕೆ ಇದ್ದಂಥ ಒಂದು ಸಾಲದ ಮೇಲಿನ ಬಡ್ಡಿ. ಸುಸ್ತಿ ಬಡ್ಡಿಯನ್ನು ವಜಾ ಮಾಡಿದ್ದೇವೆ ಎಂದು ತಾವು ಹೇಳಬೇಕು. ಪರಿಗಣಿಸಲಾಗುವುದು ಎನ್ನುವ ಪಾರಿತೋಷಕ ಭಾಷೆ ಯಾರೋ ಇಂಗ್ಲೀಷ್‌ನವರು ನಮ್ಮನ್ನು ಶೋಷಣೆ ಮಾಡುವುದಕ್ಕೆ ಬಳಸಿದ ಭಾಷೆಯನ್ನು ತಮ್ಮ ಬಾಯಲ್ಲಿ ನಾವು ಕೇಳುವುದಕ್ಕೆ ಇಷ್ಟಪಡುವುದಿಲ್ಲ. ನೀವು ಇಲ್ಲಿ ಹೇಳಬೇಕು. ಇಲ್ಲಿ ಕುಳಿತುಕೊಂಡು ನೀವು ಇಂಗ್ಲೀಷ್‌ನವರದ್ದೇ ಅರ್ಥವೆಂದರೆ ನಾವು ಮಾತನಾಡುವುದಕ್ಕೆ ಅರ್ಥ ಉಳಿಯುತ್ತದೆಯೇ? ಪರಿಗಣಿಸಲಾಗುವುದು ಎಂದರೂ ಸ್ವಲ್ಪ ನಮಗೆ ಆಸೆ ಇದೆ. ಒಂದು ಮಾತನ್ನು ಹೇಳಿದಿರಿ, ಪರಿಗಣಿಸಲಾಗುವುದಿಲ್ಲ ಎಂದು ಇಲ್ಲಿ ತಿದ್ದುಪಡಿ ಮಾಡಿ ಎಂದರೆ ಇಲ್ಲಿ ನಿಂತುಕೊಂಡು ನಾವು ಭಾಷಣವನ್ನು ಮಾಡಬೇಕಾ? ಪರಿಗಣಿಸುತ್ತೇನೆ ಎನ್ನುವ ಮಾತನ್ನು waive ಮಾಡಿದ್ದೇನೆ ಎನ್ನುವ ಮಾತನ್ನು ತಾವು ಹೇಳಬೇಕು.

ಶ್ರೀ ಎಂ.ಪಿ. ಪ್ರಕಾಶ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಜೆ.ಹೆಚ್. ಪಟೇಲರು ಇಲ್ಲಿ ಈ ವಿಚಾರದಲ್ಲಿ ಹೇಳಿದ್ದರು. ಪರಿಗಣಿಸಲಾಗುವುದು, it is under consideration, ಎಂದು ಅಂದರೆ the file is not available ಎಂದೇ ಅದರ ಅರ್ಥ. If it is actually considered ಎಂದರೆ file is available, yet to be taken a decision ಎಂದು ಅರ್ಥ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಕ್ಯಾಬಿನೆಟ್‌ನಲ್ಲಿ ಇಟ್ಟು ಒಂದು ಬಜೆಟನ್ನು ಒಪ್ಪಿಕೊಂಡು ಪರಿಗಣಿಸಲಾಗುವುದು ಎಂದು ಬಜೆಟ್‌ನಲ್ಲಿ ಓದಿ ಜೆ.ಹೆಚ್. ಪಟೇಲರು ಹೇಳಿದರು ಎಂದು ಹೀಗೆ ನೆಗೆಟೀವ್ ಆಗಿ ಹೇಳಿಬಿಟ್ಟರೆ ನಾವೆಲ್ಲಾ ಹೋಗಿ ಕ್ಷೇತ್ರದಲ್ಲಿ ಏನು ಹೇಳಬೇಕು?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಈ ಸಭೆಯ ನಡವಳಿಕೆ ಲವಲವಿಕೆಯಾಗಿರಲಿ ಎಂದು ಹೇಳಿದೆ, Yes Master's Series ನಲ್ಲಿ ಈ ರೀತಿ ಇವೆಲ್ಲಾ ಇರುತ್ತವೆ. ಆ ಕಾರಣಕ್ಕಾಗಿಯೇ ಅವರು ಅದನ್ನು ಹೇಳಿದ್ದರು ಎಂದು ನಾನು ಹೇಳಿದೆ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೇ, ಇಲ್ಲಿ ಜೆ.ಹೆಚ್. ಪಟೇಲರು ಇಲ್ಲ. ಅವರೊಬ್ಬ ಒಳ್ಳೆಯ ಮಹಾನ್ ವ್ಯಕ್ತಿ. ಅವರ ಹೆಸರನ್ನು ಹೇಳಿ consideration ಎಂದರೆ ಹೇಗೆ?

ಶ್ರೀ ಎಂ.ಪಿ. ಪ್ರಕಾಶ್ : ಏನೂ ತಪ್ಪಿಲ್ಲ.

ಶ್ರೀ ಎಸ್. ರಾಜೇಂದ್ರನ್ : ಏನೂ ತಪ್ಪಿಲ್ಲ. ತಪ್ಪೇನೆಂದರೆ ಅವರು ಜೋಕ್ ಮಾಡುವುದಕ್ಕೆ ಹೇಳಿದೆ ಎಂದು ಹೇಳಿದರು. ಆ ಜೋಕ್ ಬೇಡ. confirm ಮಾಡಿ. ಒಂದು ಸಲ ಅವರ ಹೆಸರನ್ನು ಹೇಳಿದಮೇಲೆ you have to announce. ಮಾನ್ಯ ಮಾಧುಸ್ವಾಮಿಯವರು ಏನು ಹೇಳಿದರು, ಹಣಕಾಸು ಸಚಿವರು ಸಿದ್ಧರಾಮಯ್ಯನವರು ಲಾಸ್ಟ್ ಟೈಮ್ ಇದ್ದರು, ಮಾಡಿಕೊಡುತ್ತೇನೆ ಎಂದು ಹೇಳಿದ್ದಿರಿ. ಈಗ ಪಾಪ ಅವರು ಇಂಡಿವಿಜುಯಲ್ ಆಗಿಲ್ಲವೇ?

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸಿದ್ಧರಾಮಯ್ಯನವರಿಗೆ ಒತ್ತಾಯ ಮಾಡುತ್ತಿದ್ದೇನೆ, ದಯಮಾಡಿ ನಿಮ್ಮ ಪ್ರಣಾಳಿಕೆಯಲ್ಲಿ ನಿಮ್ಮ ಬೈಬಲ್, ನಿಮ್ಮ ಗೀತೆ, ಕುರಾನ್, ಬಹಳ ಭಾಷಣ ಮಾಡಿ ಜನಗಳಿಂದ ವೋಟನ್ನು ಹಾಕಿಸಿಕೊಂಡು ಬಂದಿದ್ದೀರಿ. ಅದರಲ್ಲಿ ಹೇಳಿದ ರೀತಿಯಲ್ಲಿ ದ್ರೋಹ ಮಾಡದಂತೆ ಬಡ್ಡಿ ಸುಸ್ತಿ ಬಡ್ಡಿಯನ್ನು ಕಳೆದ ವರ್ಷದ್ದು ಮನ್ನಾ ಮಾಡಬೇಕು ಅಧ್ಯಕ್ಷರೇ. ಇಲ್ಲದಿದ್ದರೆ ನಿಮಗೆ ಯಾವ ನೈತಿಕ ಹಕ್ಕೂ ಇಲ್ಲ. ಇಲ್ಲಿ ಸರ್ಕಾರದಲ್ಲಿ ಕುಳಿತುಕೊಳ್ಳುವುದಕ್ಕೆ ನೀವು ಪ್ರಮುಖವಾಗಿ ವೋಟ್ ತೆಗೆದುಕೊಂಡಿರುವ ಒಂದೇ ಆಧಾರದ ಮೇಲೆ, ಈ ರಾಜ್ಯ ಹಳ್ಳಿಗಾಡಿನ ಪ್ರದೇಶ, ನಿಮ್ಮನ್ನು ನಂಬಿ ಅವತ್ತು ವೋಟನ್ನು ಹಾಕಿದ್ದಾರೆಂದರೆ ನಿಮ್ಮ ಪಕ್ಷ ನೀವು ರೈತರ ಬೆಂಬಲಕ್ಕೆ ಇರುತ್ತೀರಿ ಎಂದು ಹಾಕಿದ್ದಾರೆ. ಇಲ್ಲಿ ಬಂದು ಪರಿಗಣಿಸಲಾಗುವುದು ಎಂದರೆ ಅದೇ ಇಂಗ್ಲೀಷ್‌ನವರದ್ದೇ ಭಾಷೆ ಎಂದರೆ ನಿಜವಾಗಿ ಅದಕ್ಕೆ ಅರ್ಥ ಉಳಿಯುವುದಿಲ್ಲ. ನೀವು ಇಲ್ಲಿ next ಬಂದುಬಿಡುತ್ತೀರಿ. ಹುಷಾರಾಗಿರಿ. ಇವತ್ತಿನವರೆಗೆ ಇಲ್ಲಿ ಕುಳಿತಿಲ್ಲ. ಇದು ಬಹಳ ಅಪಾಯದ ಜಾಗ. ದಯಮಾಡಿ ತಾವು ಇಲ್ಲಿ ಬರುವುದು ಬೇಡ. ಮೊದಲೇ ಅದನ್ನು ತೀರ್ಮಾನ ಮಾಡಬೇಕು. ಎರಡನೆಯದು, ಕೆಪಿಟಿಸಿಎಲ್ ಬಗ್ಗೆ ಮಾನ್ಯ ಸಿದ್ಧರಾಮಯ್ಯನವರು ಹೇಳಿದರು, ಏಕೆಂದರೆ ಎರಡು ಮೇಜರ್ ಅಲೊಕೇಷನ್ ಇರುವ ಏರಿಯಾ. ಇವತ್ತು ಕೆಪಿಟಿಸಿಎಲ್‌ನ್ನು ಕೊಂದಿರುವವರು ಯಾರು ಎಂದು ತಾವು ಯೋಚನೆ ಮಾಡಬೇಕು. ನಾವಲ್ಲ. ರೈತರಲ್ಲ. ನಾನೊಂದು ಇಲ್ಲಿ ನಿಮಗೆ ಸ್ಪಷ್ಟೀಕರಣವನ್ನು ಕೊಡುವುದಕ್ಕೆ ಬಯಸುತ್ತೇನೆ, ನಮ್ಮ ಹೆಸರಿನಲ್ಲಿ ಇವತ್ತು ಬ್ಯುರೋಕ್ರಸಿ ಅಥವಾ ಅಲ್ಲಿರುವ officialdom ಕೆಪಿಟಿಸಿಎಲ್‌ನ್ನು ನಿರ್ನಾಮಮಾಡಿದೆ.

ಇದು ಬಹಳ ಗಹನವಾದ ವಿಚಾರ ನೋಡುವವರಿಗೆಲ್ಲಾ 45 ರಿಂದ 47 ಪರ್‌ಸೆಂಟ್ ನಾವು ಇರಿಗೇಷನ್‌ಗೆ ಬಳಸುತ್ತೇವೆಂದು ಈ ವರೆಗೆ ಒಂದು ದೊಡ್ಡ ವ್ಯಾಖ್ಯಾನವನ್ನು, ಪ್ರಚಾರವನ್ನು ನಮ್ಮ ವಿರುದ್ಧವಾಗಿ ಮಾಡಿದ್ದಾರೆ. ಇವರ ಹತ್ತಿರ ವಾಸ್ತವವಾಗಿ ಎನರ್ಜಿ ಅಡಿಟ್ ರಿಪೋರ್ಟ್ ಇಲ್ಲ. ವಾಸ್ತವವಾಗಿ ಅದನ್ನು ಮೀಟರ್ ಮಾಡಿಲ್ಲ, ಎಷ್ಟು ಐ.ಪಿ. ಗೆ ಕೊಡುತ್ತಿದ್ದೇನೆ ಎಂದು ಯಾವ ಲೆಕ್ಕವನ್ನು ಹೇಳಿಲ್ಲ. ಯಾವ್ಯಾವ ಹಂತದಲ್ಲಿ ಕದಿಯುತ್ತಾರೆ, ಯಾವ್ಯಾವ ಹಂತದಲ್ಲಿ ಸೋರಿಕೆಯಾಗುತ್ತದೆ, ಯಾವ್ಯಾವ ಹಂತದಲ್ಲಿ ದೊಡ್ಡ ದೊಡ್ಡ ಕೈಗಾರಿಕೆಯವರು, ಅವರು ಇವರು ದುರುಪಯೋಗ ಮಾಡುತ್ತಿದ್ದಾರೆ, ಆ ಎಲ್ಲಾ lossನ್ನು ತಂದು ನಮ್ಮ ಮೇಲೆ ಹೇರುತ್ತಿದ್ದಾರೆ. ರೈತರು ಬಹಳ ವಿದ್ಯುಚ್ಛಕ್ತಿಯನ್ನು ಕನ್‌ಸ್ಯೂಮ್ ಮಾಡುತ್ತಾರೆ ಎಂದು ಹೇಳುತ್ತಾರೆ. ಮಾನ್ಯ ಸಿದ್ದರಾಮಯ್ಯನವರೇ, ತಾವು ಒಂದು ಮನಸ್ಸನ್ನು ಕೆ.ಪಿ.ಟಿ.ಸಿ.ಎಲ್ ನವರ ಮೇಲೆ ತೆಗೆದುಕೊಳ್ಳಬೇಕು. ಏಕೆಂದರೆ ಐದರಿಂದ ಆರು ತಿಂಗಳುಗಳಾಗಿದೆ ಟ್ರಾನ್ಸ್‌ಫಾರ್ಮರ್ಸ್ ಫೇಲ್ ಆಗಿ. ಆರು ತಿಂಗಳಿನಿಂದ ಈವರೆಗೆ ರೀಪ್ಲೇಸ್ ಮಾಡುವುದರಲ್ಲೇ ಇದ್ದಾರೆ. ಒಂದು ಸತ್ಯವನ್ನು ನಿಮಗೆ ಹೇಳುತ್ತೇನೆ, ಕ.ವಿ.ಕಾ.ಗೆ ಒಂದೇ ಒಂದು ಆರ್ಡರ್‌ನ್ನು ಕೊಡುವಷ್ಟು ದೊಡಸ್ತಿಕೆ ಎಂ.ಡಿ. ಯವರಿಗೆ ಇಲ್ಲ. ಹಿಂದೆ ಇದ್ದ ಎಂ.ಡಿ. ಅಷ್ಟೂ ಟ್ರಾನ್ಸ್‌ಫಾರ್ಮರ್ಸ್‌ನ್ನು ಪ್ರೈವೇಟ್‌ನಲ್ಲಿ ಮಾಡಿಸಲು ಹುನ್ನಾರ ಮಾಡಿ, ಹೋದ ಸಲ ಅವರು ಎಂಟು ಸಾವಿರ ಟ್ರಾನ್ಸ್‌ಫಾರ್ಮರ್ಸ್‌ನ್ನು ಇಂಡೆಂಟ್ ಮಾಡುತ್ತಾರೆ. ಹಾಗಾದರೆ ಕ.ವಿ.ಕಾ ಫ್ಯಾಕ್ಟರಿ ಯಾರದ್ದು? ಏಕೆ ನಿಮ್ಮ ಇನ್‌ಸ್ಟಿಟ್ಯೂಷನ್‌ನ್ನು ಕೊಲ್ಲುತ್ತಿದ್ದೀರಿ? ಮುಚ್ಚಿರಿ ಆ ಕ.ವಿ.ಕಾ ಫ್ಯಾಕ್ಟರಿಯನ್ನು. ಟ್ರಾನ್ಸ್‌ಫಾರ್ಮರ್‌ನ್ನು ಮಾಡುವುದೇ ಮೈನ್ ಉದ್ದೇಶಕ್ಕೆ ಈ ರಾಜ್ಯ ಸರ್ಕಾರ ಮಾಡಿದಂತಹ ಒಂದು ಕ.ವಿ.ಕಾ ಫ್ಯಾಕ್ಟರಿಗೆ ಕೆ.ಪಿ.ಟಿ.ಸಿ.ಎಲ್.ನ ಎಂ.ಡಿ. ಯವರು ಇಂಡೆಂಟ್ ಹಾಕುವುದಿಲ್ಲ. ಅಲ್ಲಿಂದ ಟ್ರಾನ್ಸ್‌ಫಾರ್ಮರ್ಸ್‌ನ್ನು ತರಿಸಿಕೊಳ್ಳುವುದಿಲ್ಲ. ಖಾಸಗಿಯವರು ಇವರಿಗೆ

ಟ್ರಾನ್ಸ್‌ಫಾರ್ಮರ್ಸ್‌ನ್ನು ಕೊಡಬೇಕು. ಖಾಸಗಿಯಿಂದ ಬಂದಂಥ ಟ್ರಾನ್ಸ್‌ಫಾರ್ಮರ್ಸ್ ಎಷ್ಟು ದಿವಸಕ್ಕೆ ಸುಟ್ಟು ಹೋಗುತ್ತದೆ ಎಂಬ ಬಗ್ಗೆ ತಾವು ಸ್ವಲ್ಪ ಲೆಕ್ಕ ತರಿಸಬೇಕು. ನಾನು ಡಿಮ್ಯಾಂಡ್ ಮಾಡುತ್ತೇನೆ, ಇವತ್ತು ರೈತರನ್ನು ಹಣ ಕಟ್ಟಿ ಎಂದು ಕೇಳುವಂಥ ನೈತಿಕವಾದ ಸ್ಥಿತಿಯಲ್ಲಿ ನೀವು ಮತ್ತು ಈ ಸರ್ಕಾರ ಇಲ್ಲ. ನೀವು ನಮಗೆ ಎಂದೂ ಹತ್ತು ಹನ್ನೆರಡು ಗಂಟೆ ವಿದ್ಯುಚ್ಛಕ್ತಿಯನ್ನು ಕೊಟ್ಟಿಲ್ಲ. ನಮಗೆ ಎಂದೂ ಇಂಟ್ರಪ್‌ಷನ್ ಇಲ್ಲದೆಯೆ ಪವರ್‌ನ್ನು ಕೊಟ್ಟಿಲ್ಲ, ನಮಗೆ ಎಂದೂ ಸುಟ್ಟು ಹೋಗಿರುವ ಟ್ರಾನ್ಸ್‌ಫಾರ್ಮ್ಸ್‌ನ್ನು ಸಕಾಲಕ್ಕೆ ರೀಪ್ಲೇಸ್ ಮಾಡಿಲ್ಲ. 95 ಪರ್‌ಸೆಂಟ್ ನೀವು ಕೆ.ಇ.ಬಿ. ಅಥವಾ ಕೆ.ಪಿ.ಟಿ.ಸಿ.ಎಲ್. ನಿಂದ ವಸೂಲಿ ಮಾಡಬೇಕು ಎಂದು ತಾಕೀತು ಮಾಡುತ್ತೇನೆಂದು ಭಾಷಣ ಓದಿಬಿಟ್ಟರೆ ನಾವೆಲ್ಲಿಗೆ ಹೋಗಬೇಕು? ದಯಮಾಡಿ ಇದನ್ನು ರೀಕನ್‌ಸಿಡರ್ ಮಾಡಬೇಕು, ಆ 95 ಪರ್‌ಸೆಂಟ್‌ನಲ್ಲಿ ಕೃಷಿಗೆ ಉಪಯೋಗಿಸುತ್ತಿರುವ ಐ.ಪಿ. ಸೆಟ್ಟನ್ನು ನಾನೇನು ಇನ್‌ಫ್ರಾಸ್ಟ್ರಕ್ಚರ್ ಕೊಡುತ್ತೇನೆ ಅಗ್ರಿಕಲ್ಚರ್‌ಗೆ ಎಂದು ತಾವು ಭಾಷಣ ಮಾಡಿದ್ದೀರಿ ಅದರಲ್ಲಿ ಸೇರಿಸಿಕೊಂಡು ಅದನ್ನು ವೇವ್ ಮಾಡಿ ನಮ್ಮ ರೈತರಿಗೆ ನಿರಾಳವಾಗಿ ಉಸಿರಾಡಲು ಅವಕಾಶ ಮಾಡಿಕೊಡಬೇಕು. ಎರಡನೆಯದಾಗಿ, ಇಡೀ ತೋಟಗಾರಿಕೆ ಇಲಾಖೆ, ತೋಟಗಾರಿಕೆ ಕ್ಷೇತ್ರ ಈ ರಾಜ್ಯದಲ್ಲಿ ನೆಗ್ಲೆಕ್ಟ್ ಆಗಿದೆ.

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೆ, ಈಗ ಐದು ಗಂಟೆಗೆ ನಮ್ಮ ರಾಜ್ಯಸಭೆ ಉಪಾಧ್ಯಕ್ಷರಿಗೆ ಒಂದು ಸನ್ಮಾನವಿದೆ. ಆದ್ದರಿಂದ ಎಲ್ಲರೂ ಹೋಗಬೇಕಾಗಿದೆ, ಆದ್ದರಿಂದ ತಾವು ನಾಳೆ ಮಾತನಾಡಬಹುದಲ್ಲಾ?

ಶ್ರೀ ಜೆ.ಸಿ. ಮಾಧುಸ್ವಾಮಿ : ಅದು ತಮ್ಮ ಇಷ್ಟ ಸ್ವಾಮಿ.

ಅಧ್ಯಕ್ಷರು : ಈಗ ಸದನವನ್ನು ನಾಳೆ ಬೆಳಿಗ್ಗೆ ಹತ್ತು ಗಂಟೆವರೆಗೆ ಮುಂದೂಡಲಾಗಿದೆ.

(ಸದನವು ಸಂಜೆ 5 ಗಂಟೆ 4 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 27ನೇ ಜುಲೈ ಮಾಹೆ 2004ರ ಮಂಗಳವಾರದಂದು ಬೆಳಿಗ್ಗೆ 10–00 ಗಂಟೆಗೆ ಸೇರಲು ನಿಶ್ಚಯಿಸಿತು)

12. ಅನುಬಂಧ I

ರಾಜ್ಯದ ಬರಕಾಮಗಾರಿಗಾಗಿ ಕೇಂದ್ರದಿಂದ ಬಿಡುಗಡೆಯಾಗಿರುವ ಆಹಾರ ಧಾನ್ಯಗಳು

175 (629) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಬರ ಕಾಮಗಾರಿಗಾಗಿ ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಆಹಾರಧಾನ್ಯದ ಪ್ರಮಾಣ ಎಷ್ಟು;

ಆ) ಆ ಆಹಾರಧಾನ್ಯಗಳನ್ನು ಯಾವ ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಪ್ರಮಾಣದಲ್ಲಿ ಬಿಡುಗಡೆ ಮಾಡಲಾಗಿದೆ; (ಜಿಲ್ಲಾವಾರು, ವರ್ಷವಾರು ವಿವರ ನೀಡುವುದು);

ಇ) ಈ ಆಹಾರ ಧಾನ್ಯಗಳಲ್ಲಿ ಎಷ್ಟು ಉಪಯೋಗಿಸಲಾಗಿದೆ; ಉಳಿದಿರುವ ಆಹಾರಧಾನ್ಯದ ಪ್ರಮಾಣ ಎಷ್ಟು; (ಜಿಲ್ಲಾವಾರು, ವರ್ಷವಾರು ವಿವರ ನೀಡುವುದು);

ಈ) ಬರ ಕಾಮಗಾರಿಗಾಗಿ ಬಿಡುಗಡೆ ಮಾಡಿರುವ ಆಹಾರಧಾನ್ಯಗಳನ್ನು ಅಧಿಕಾರಿಗಳು ದುರುಪಯೋಗ ಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಎಷ್ಟು ಇಂತಹ ಪ್ರಕರಣಗಳು ಪತ್ತೆಯಾಗಿದೆ; (ವಿವರಗಳನ್ನು ನೀಡುವುದು);

ಉ) ಈ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಎಷ್ಟು ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ?